ಆ) 2004ನೇ ಸಾಲಿನ ಫೆಬ್ರವರಿ – 05 ಅಂತ್ಯಕ್ಕೆ ರೈತರಿಗೆ ನೀಡಲಾಗಿರುವ ಸೌಲಭ್ಯಗಳ ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ರೇಷ್ಮೆ ಕೃಷಿ ಅಭಿವೃದ್ಧಿಗಾಗಿ ಕೆಳಕಂಡ ಸೌಲಭ್ಯಗಳು ಒದಗಿಸಲಾಗುತ್ತಿದೆ.

1. ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣಕ್ಕೆ ಸಹಾಯಧನ.

2. ರೇಷ್ಮೆ ಹುಳು ಸಾಕಾಣಿಕೆ ಸಲಕರಣೆಗಳಿಗೆ ಸಹಾಯಧನ.

3. ಹಿಪ್ಪುನೇರಳೆ ತೋಟಕ್ಕೆ ಹನಿ ನೀರಾವರಿ ಅಳವಡಣೆಗೆ ಸಹಾಯಧನ.

4. ರೋಗ ನಿಯಂತ್ರಣಕ್ಕಾಗಿ ಸೋಂಕು ನಿವಾರಕಗಳ ಸರಬರಾಜು.

5. ಚಾಕಿ ಸಾಕಾಣಿಕೆ ಕೇಂದ್ರಗಳ ನಿರ್ಮಾಣ ಮತ್ತು ಸಲಕರಣೆಗಳಿಗೆ ಸಹಾಯಧನ.

6. ಹೊಸದಾಗಿ ರೇಷ್ಮೆ ಕೃಷಿ ಕೈಗೊಳ್ಳುವ ರೈತರಿಗೆ ತರಬೇತಿ ಮತ್ತು ಟೂಲ್‌ಕಿಟ್ ನೀಡುವುದು.

7. ಕಿಸಾನ್ ನರ್ಸರಿ ಯೋಜನೆಯಡಿ ಹೊಸ ಹಿಪ್ಪುನೇರಳೆ ತಳಿ ಅಭಿವೃದ್ಧಿಗೆ ಪ್ರೋತ್ಸಾಹಧನ

8. ಬ್ಯಾಂಕುಗಳಿಂದ ಸಾಲ ಸೌಲಭ್ಯ ಒದಗಿಸುವುದು.

9. ನೂತನ ತಾಂತ್ರಿಕತೆಗಳ ಅನುಸರಣೆಗಾಗಿ ತರಬೇತಿ.

10. ಬೆಳೆದ ಗೂಡುಗಳ ವಿಲೇವಾರಿಗೆ ಗೂಡು ಮಾರುಕಟ್ಟೆಗಳ ಸ್ಥಾಪನೆ.

11. ಹೊಸ ಪ್ರದೇಶದಲ್ಲಿ ಉತ್ಪಾದಿಸಿ ಸ್ಥಳೀಯ ಮಾರುಕಟ್ಟೆಗಳಲ್ಲಿ ವಹಿವಾಟು ಮಾಡಿದ ಪ್ರತಿ ಕೆ.ಜಿ.ಗೂಡಿಗೆ ರೂ.5.00 ರ ಪ್ರೋತ್ಸಾಹಧನ.

2660 (2765) ಶ್ರೀ ಕೃಷ್ಣ ಪಾಲೇಮಾರ್ ಜೆ. (ಸುರತ್ಕಲ್) :– ಮಾನ್ಯ ಬೃಹತ್, ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಾರಿಗೊಳಿಸಲಾಗುತ್ತಿರುವ ವಿಶೇಷ ಆರ್ಥಿಕ ವಲಯ ಯೋಜನೆಯ ವಿವರಗಳೇನು;

ಆ) ಯಾವ ವರ್ಗದ ಕೈಗಾರಿಕೆಗಳನ್ನು ಈ ಯೋಜನೆಯ ಅಡಿಯಲ್ಲಿ ಪ್ರಮುಖವಾಗಿ ಅಹ್ವಾನಿಸಲಾಗುವುದೆ;

ಇ) ಈ ಯೋಜನೆಗಾಗಿ ಮಿತಿಗೊಳಿಸಿದ ಭೂಮಿಯ ಸ್ವಾಧೀನದ ವಿವರಗಳೇನು;

ಈ) ಭೂ ಮಾಲೀಕರಿಗೆ ಪರಿಹಾರವಾಗಿ ನೀಡುವ ಸೌಲಭ್ಯ ಮತ್ತಿತರ ವಿವರಗಳೇನು;

ಉ) ವಿಶೇಷ ಆರ್ಥಿಕ ವಲಯ ಮೂಲಕ ಎಷ್ಟು ಜನರಿಗೆ ಉದ್ಯೋಗಾವಕಾಶವನ್ನು ಕಲ್ಪಿಸಿಕೊಡುವ ಉದ್ದೇಶವನ್ನು ಸರ್ಕಾರ ಹೊಂದಿದೆ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಬೃಹತ್, ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ ಕರಾವಳಿ ವಿಶೇಷ ಆರ್ಥಿಕ ವಲಯ ಸ್ಥಾಪನೆಗಾಗಿ ಮೆ॥ ಕೆನರಾ ವಾಣಿಜ್ಯೋದ್ಯಮ ಸಂಘ ಮಂಗಳೂರುರವರು ಸಲ್ಲಿಸಿದ ಅರ್ಜಿಯನ್ನು ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದು, ಕೇಂದ್ರ ಸರ್ಕಾರ ಈ ಯೋಜನೆಗೆ ತಾತ್ವೀಕ ಅನುಮೋದನೆಯನ್ನು ದಿನಾಂಕ 8–8–2003 ರಂದು ನೀಡಿದೆ. ತದನಂತರ ಯೋಜನೆಯನ್ನು ಕಾರ್ಯತಗೊಳಿಸಲು ಕೆನರಾ ವಾಣಿಜ್ಯೋದ್ಯಮ ಸಂಘ, ಓ.ಎನ್.ಜಿ.ಸಿ. ಮತ್ತು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ನಡುವೆ ಒಂದು ಒಡಂಬಡಿಕೆಯನ್ನು ದಿನಾಂಕ 30–8–2004 ರಂದು ಸಹಿ ಮಾಡಲಾಗಿದೆ. ಇದಲ್ಲದೆ, ಮಂಗಳೂರಿನಲ್ಲಿ ಮಾಹಿತಿ ತಂತ್ರಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿದಂತೆ, ವಿಶೇಷ ಆರ್ಥಿಕ ವಲಯ ಸ್ಥಾಪನೆಗಾಗಿ ದಿನಾಂಕ 15–1–2005ರಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.

ಆ) ಕರಾವಳಿ ವಿಶೇಷ ಆರ್ಥಿಕ ವಲಯದಲ್ಲಿ ಪ್ರಮುಖವಾಗಿ ಪೆಟ್ರೋಕೆಮಿಕಲ್ ಕೈಗಾರಿಕೆಗಳು ಸ್ಥಾಪನೆಯಾಗಿದ್ದು, ಇತರೆ ರಫ್ತು ಆಧಾರಿತ ಕೈಗಾರಿಕೆಗಳಿಗಾಗಿ ಸಹ ಪ್ರತ್ಯೇಕ ಪ್ರದೇಶವನ್ನು ಕಾಯ್ದಿರಿಸಲಾಗುವುದು. ಮಾಹಿತಿ ತಂತ್ರಜ್ಞಾನ ವಿಶೇಷ ಆರ್ಥಿಕ ವಲಯದಲ್ಲಿ ತಂತ್ರಾಂಶ, ಯಂತ್ರಾಂಶ ಹಾಗೂ ಇತರೆ ಮಾಹಿತಿ ತಂತ್ರಜ್ಞಾನ ಆಧಾರಿತ ಸೇವಾಕ್ಷೇತ್ರ ಘಟಕಗಳನ್ನು ಸ್ಥಾಪಿಸಲು ಅವಕಾಶ ನೀಡಲಾಗುವುದು.

ಇ) ಕರಾವಳಿ ವಿಶೇಷ ಆರ್ಥಿಕ ವಲಯ ಸ್ಥಾಪನೆಗಾಗಿ ಮಂಗಳೂರು ಬಂದರುಗೆ ಸೇರಿದ 140 ಎಕರೆ ಜಮೀನು ಮತ್ತು ಮಂಗಳೂರು ತೈಲ ಶುದ್ಧೀಕರಣ ಘಟಕದ ಹತ್ತಿರದ 754 ಎಕರೆ ಜಮೀನನ್ನು ಗುರುತಿಸಲಾಗಿದೆ. ಅದೇ ರೀತಿ ಮಾಹಿತಿ ತಂತ್ರಜ್ಞಾನ ವಿಶೇಷ ಆರ್ಥಿಕ ವಲಯಕ್ಕಾಗಿ ಮಂಗಳೂರು ತಾಲ್ಲೂಕಿನ ಕೈರಂಗಳ ಮತ್ತು ಪಜರು ಗ್ರಾಮ ವ್ಯಾಪ್ತಿಯಲ್ಲಿ ಬರುವ 508 ಎಕರೆ ಜಮೀನನ್ನು ಗುರುತಿಸಲಾಗಿದೆ.

ಈ) ಈ ಯೋಜನೆಗಾಗಿ ಭೂ ಸ್ವಾಧೀನ ಕಾರ್ಯ ಈಗ ಪ್ರಾರಂಭವಾಗಿದ್ದು, ರೈತರಿಗೆ ನೀಡಬೇಕಾದ ಪರಿಹಾರ ಮತ್ತಿತರ ಪುನರ್‌ವಸತಿ ಸೌಲಭ್ಯಗಳ ವಿವರಗಳನ್ನು ಅಂತಿಮ ಗೊಳಿಸಬೇಕಾಗಿದೆ.

ಉ) ಈಗಾಗಲೇ, ಕರಾವಳಿ ವಿಶೇಷ ಆರ್ಥಿಕ ವಲಯದಲ್ಲಿ ಸ್ಥಾಪಿಸಲು ರಾಜ್ಯ ಉನ್ನತ ಮಟ್ಟದ ಸಮಿತಿಯಿಂದ ಅನುಮೋದಿತ ಮೆ॥ ಎಂ.ಆರ್.ಪಿ.ಎಲ್‌ರವರ ನಾಲ್ಕು ಯೋಜನೆಗಳಲ್ಲಿ 1710 ಜನರಿಗೆ ಉದ್ಯೋಗಾವಕಾಶ ದೊರಕುವ ನಿರೀಕ್ಷೆಯಿದೆ. ಅದೇ ರೀತಿ ಮೆ॥ ಇನ್ಫೋಸ್ಸ್ ಟೆಕ್ನಾಲಜಿ ಲಿ., ರವರು ಮಂಗಳೂರಿನ ಮಾಹಿತಿ ತಂತ್ರಜ್ಞಾನ ವಿಶೇಷ ಆರ್ಥಿಕ ವಲಯದಲ್ಲಿ ಸ್ಥಾಪಿಸಲಿರುವ ಘಟಕದಲ್ಲಿ 6000 ತಾಂತ್ರಿಕ ಪದವಿಧರರಿಗೆ ಉದ್ಯೋಗಾವಕಾಶ ದೊರಕುವುದು. ಇದಲ್ಲದೆ ಮುಂಬರುವ ದಿನಗಳಲ್ಲಿ ಮತ್ತಷ್ಟು ಉದ್ಯಮಿಗಳು ತಮ್ಮ ಘಟಕಗಳನ್ನು ಮೇಲ್ಕಂಡ ಆರ್ಥಿಕ ವಲಯಗಳಲ್ಲಿ ಸ್ಥಾಪಿಸಲು ಮುಂಬರುವ ನಿರೀಕ್ಷೆಯಿದೆ.

2661 (2766) ಶ್ರೀ ಕೃಷ್ಣ ಪಾಲೇಮಾರ್ ಜೆ. (ಸುರತ್ಕಲ್) :– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಖಾಯಂ ಆಯೋಗದ ವರದಿಯನ್ನು ಸರಕಾರ ಅಂಗೀಕರಿಸಿದೆಯೆ;

ಆ) ಹೌದಾದಲ್ಲಿ ಆ ಕುರಿತಾದ ವಿವರಗಳೇನು;

ಇ) ಇಲ್ಲವಾದಲ್ಲಿ ಅಂಗೀಕರಿಸಿ ಶಿಫಾರಸ್ಸುಗಳನ್ನು ಅನುಷ್ಠಾನಕ್ಕೆ ತರಲು ಸರಕಾರದ ಸಕಾಲಿಕ ಕಾರ್ಯಯೋಜನೆಗಳೇನು;

ಈ) ಹಿಂದುಳಿದ ವರ್ಗಗಳ ಸರ್ವಾಂಗೀಣ ಅಭಿವೃದ್ಧಿಗಾಗಿ ಆಯೋಗದ ವ್ಯಾಪ್ತಿಗೆ ವಹಿಸಿದ ವಿಷಯದ ವಿವರಗಳೇನು;

ಉ) ರಾಜ್ಯದಲ್ಲಿ ಎಷ್ಟು ಜಾತಿ ಜನಾಂಗಗಳು ತಮ್ಮನ್ನು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರ್ಪಡೆ ಮಾಡುವಂತೆ ಮನವಿ ಸಲ್ಲಿಸಿವೆ(ಜಿಲ್ಲಾವಾರು ಮಾಹಿತಿ ಒದಗಿಸುವುದು)?

ಡಾ॥ ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಪ್ರೋ॥ ರವಿವರ್ಮ ಕುಮಾರ್ ನೇತೃತ್ವದ ಆಯೋಗವು ಡಿಸೆಂಬರ್ 2005ರಲ್ಲಿ ಸಲ್ಲಿಸಿದ್ದ ವಿಶೇಷ ವರದಿ ಮತ್ತು ಸಲಹೆಗಳನ್ನು ಸರ್ಕಾರವು ಪರಿಶೀಲಿಸಿ ಹೊಸ ಕೆನೆಪದರ ಆದೇಶವನ್ನು ದಿನಾಂಕ 30–03–2002ರಲ್ಲಿ ಹೊರಡಿಸಿದೆ.

ಆ) ಪ್ರೋ॥ ರವಿವರ್ಮ ಕುಮಾರ್ ಆಯೋಗವು ಸಲ್ಲಿಸಿದ 71 ಸಲಹೆಗಳಲ್ಲಿ 70ನ್ನು ಅಂಗೀಕರಿಸಿದ್ದು ಇದರಲ್ಲಿ 11 ಜಾತಿಯ 30 ಪರ್ಯಾಯ ಪದಗಳನ್ನು ಸೇರ್ಪಡೆ ಮಾಡಿರುವುದು ಪ್ರಮುಖವಾಗಿದ್ದು 4 ಜಾತಿಗಳ ಪ್ರವರ್ಗ ಬದಲಾವಣೆ ಮಾಡಿ ದಿನಾಂಕ 30–03–2002ರ ಆದೇಶ ಹೊರಡಿಸಿದೆ. ಕೆನೆಪದರ ನೀತಿಯಲ್ಲಿ ಕೆಲವು ಬದಲಾವಣೆ ಮಾಡಿರುತ್ತದೆ.